ಸ್ನೇಹಿತರೆಲ್ಲಾ ಹೊರಗೆ ಕುಡಿಯುತ್ತಾ ಕೇಕೆ ಹಾಕಿ ನಗುವುದು ಅವನಿಗೆ ಸರಿ ಬರಲಿಲ್ಲ. ಅವರೆಲ್ಲಾ ಒಳಗೆ ಬಂದು ಅವನೊಟ್ಟಿಗೆ ಕುಳಿತುಕೊಳ್ಳಲು ಆಹ್ವಾನಿಸಿದ. 'ನಿಮ್ಮನ್ನು ಬಿಟ್ಟು ಇಲ್ಲಿ ಒಬ್ಬನೇ ಬಿದ್ದುಕೊಂಡು ಕುಡಿಯುವುದು ಯಾಕೋ ಮಜಾ ಸಿಗುತ್ತಿಲ್ಲ ಮಕ್ಳಾ' ಎನ್ನುತ್ತಿದ್ದ.

ಆಗಾಗ ಅವನ ಹೆಂಡತಿ ಕಿಟಕಿಯ ಬಳಿ ಪ್ರತ್ಯಕ್ಷಳಾಗಿ, 'ನೋಡಿದಿರಾ ಆ ಹಂದಿಗೆ? ಅದಕ್ಕೆ ದಿನಾ ಒಂದು ರಾಶಿ ಮೇವು ಹಾಕಬೇಕು, ಸ್ನಾನ ಮಾಡಿಸಬೇಕು... ನನ್ನ ಕರ್ಮ, ಕರ್ಮ!' ಎನ್ನುತ್ತಿದ್ದಳು. ಸಾಮಾನ್ಯವಾಗಿ ಮಧ್ಯಾಹ್ನದ ವೇಳೆ ಅವನ ಸ್ನೇಹಿತರು ಅವನ ಸುತ್ತ ಕುಡಿಯಲು ಕುಳಿತು ರಾದ್ಧಾಂತ ಎಬ್ಬಿಸಿರುತ್ತಿದ್ದರು. ತನ್ನ ಬಾಲ ಎತ್ತಲಿಕ್ಕೂ ಅಶಕ್ತನಾಗಿದ್ದ ಟೊಂಯಾ ಅವರನ್ನೆಲ್ಲಾ ಹೊಟ್ಟೆ ತುಂಬಾ ನಗಿಸುತ್ತಿದ್ದ. ಅವನ ಮೂವರು ಜೀವದ ಗೆಳೆಯರಾದ ಸೆಲೆಸ್ಟಿನ್, ಪ್ರೊಸ್ಪರ್, ಮತ್ತು ಸಿಜೆರ್ ಪ್ರತಿದಿನವೂ ಬಂದು ಹೋಗುತ್ತಿದ್ದರು. ಹೊರಗೆ ಅಂಗಳದಲ್ಲಿ ಬಿದ್ದಿದ್ದ ಒಂದು ಹಲಗೆ ತುಂಡನ್ನು ಟೊಂಯಾನ ಹೊಟ್ಟೆಯ ಮೇಲಿಟ್ಟು ಮಧ್ಯಾಹ್ನ ಎರಡು ಗಂಟೆಯಿಂದ ಸಂಜೆ ಆರು ಗಂಟೆಯವರೆಗೂ ಲೂಡೊ ಆಡುತ್ತಿದ್ದರು. ಟೊಂಯಾನ ಹೆಂಡತಿ ಇದನ್ನು ನೋಡಿ ನಖಶಿಖಾಂತ ಉರಿದುಕೊಳ್ಳುತ್ತಿದ್ದಳು. ಇವರು ಆಡುತ್ತಿರುವಾಗ ಅವಳು ಬಿರುಗಾಳಿಯಂತೆ ಒಳಗೆ ಬಂದು ಹಲಗೆಯನ್ನು ಕಿತ್ತು ಹೊರಗೆ ಎಸೆಯುತ್ತಿದ್ದಳು. ಸೆಲೆಸ್ಟಿನ್ ಬಿರುಗಾಳಿಗೆ ತಲೆತಗ್ಗಿಸುತ್ತಿದ್ದನಾದರೂ ಪ್ರೊಸ್ಪರ್ ಒಳಗೊಳಗೇ ಹಲ್ಲು ಮಸೆಯುತ್ತಿದ್ದ. ಒಂದು ದಿನ –

'ನಿಮ್ಮ ಜಾಗದಲ್ಲಿ ನಾನಿದ್ದಿದ್ದರೆ ಏನು ಮಾಡುತ್ತಿದ್ದೆ ಗೊತ್ತೇ ಮಿಸೆಸ್ ಟೊಂಯಾರವರೇ?' ಎಂದ.

ಟೊಂಯಾನ ಹೆಂಡತಿ ಅವಳ ಹದ್ದಿನ ಮೂಗನ್ನು ಅವನೆಡೆಗೆ ಗುರಿಮಾಡಿ ಉರಿಗಣ್ಣುಗಳನ್ನು ಬಿಟ್ಟಳು.

'ನಿಮ್ಮ ಗಂಡ ದಿನವಿಡೀ ಈ ಹಾಸಿಗೆಯಲ್ಲಿ ಬಿದ್ದುಕೊಂಡು ಎಷ್ಟೊಂದು ಬಿಸಿಯಾಗಿದ್ದಾನೆ ಗೊತ್ತೆ? ಇಷ್ಟು ದೂರದಿಂದಲೇ ನಮಗೆ ಇಷ್ಟೊಂದು ಭಯಂಕರ ಸೆಕೆಯಾಗುತ್ತದೆ. ನಾನು ನೀವಾಗಿದ್ದಿದ್ದರೆ ಅವನಿಂದ ಕೋಳಿಮೊಟ್ಟೆಗಳನ್ನು ಮರಿ ಮಾಡಿಸುತ್ತಿದ್ದೆ!' ಎಂದ ಪ್ರೊಸ್ಪರ್.

ಇವನೇನು ತನ್ನನ್ನು ಹಾಸ್ಯಮಾಡುತ್ತಿಲ್ಲ ತಾನೆ ಎಂಬಂತೆ ಟೊಂಯಾನ ಹೆಂಡತಿ ಆಶ್ಚರ್ಯಚಕಿತಳಾಗಿ ಅವನನ್ನೇ ಸ್ವಲ್ಪ ಹೊತ್ತು ಕಣ್ಣುಗಳನ್ನೂ ಮಿಟುಕಿಸದೆ ದಿಟ್ಟಿಸಿದಳು.

ಪ್ರೊಸ್ಪರ್ ಮುಂದುವರೆಸಿದ: 'ಆ ನಿಮ್ಮ ಅರಿಸಿನ ಬಣ್ಣದ ಹೇಂಟೆಯನ್ನು ಮರಿ ಮಾಡಿಸಲು ಕುಳ್ಳಿರಿಸುವ ದಿವಸವೇ ಫಾದರ್ ಟೊಂಯಾನ ಬಲಭುಜ ಮತ್ತು ಎಡಭುಜ ಕಂಕುಳಗಳ ಕೆಳಗೆ ಐದೈದು ಮೊಟ್ಟೆಗಳನ್ನು ಕಾವಿಗೆ ಇಟ್ಟುಬಿಡಿ. ಒಂದೇ ದಿನದಂದು ಮರಿಗಳು ಹೊರಬರುತ್ತವೆ. ಫಾದರ್ ಟೊಂಯಾನ ಮರಿಗಳನ್ನೂ ಅರಿಸಿನ ಬಣ್ಣದ ಹೇಂಟೆಯ ಮರಿಗಳೊಂದಿಗೆ ಬಿಡಿ. ಅವು ಫಾದರ್ ಟೊಂಯಾನ ಮರಿಗಳೆಂದು ಅದಕ್ಕೇನು ಗೊತ್ತಾಗುವುದಿಲ್ಲ!'

'ಇದು ಸಾಧ್ಯ ಅಂತಿಯಾ?' ಟೊಂಯಾನ ಹೆಂಡತಿಯ ಮುಖಭಾವದಲ್ಲಿನ ಉಗ್ರತೆ ಕೊಂಚ ಕಡಿಮೆಯಾಗಿತ್ತು.

'ಯಾಕಿಲ್ಲ? ಹೇಂಟೆಯೇ ಇಲ್ಲದ ಕಡೆ ಬಿಸಿ ಡಬ್ಬದಲ್ಲಿ ಮೊಟ್ಟೆಗಳನ್ನಿಟ್ಟು ಮರಿ ಮಾಡಿಸುವುದನ್ನು ನೀವು ಕೇಳಿಲ್ಲವೇ? ನನಗನಿಸುವಂತೆ ಫಾದರ್ ಟೊಂಯಾನ ಉಷ್ಣತೆ ಕೋಳಿಗಳ ಉಷ್ಣತೆಗಿಂತ ಹೆಚ್ಚಾಗಿದೆ.'